**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು</u>**

ದಿನಾಂಕಃ 06 ನೇ ಜುಲೈ ತಿಂಗಳು 2026ರಂದು

**<u>ಸಿಸಿ ನಂ.192/2026</u>**

**ಫಿರ್ಯಾದುದಾರರುಃ** ಸರಕಾರ (ಹುಣಸೂರು ಪಟ್ಟಣ ಪೊಲೀಸರಿಂದ)

– ವಿರುದ್ಧ –

**ಆರೋಪಿಃ** ದೇವರಾಜು.ವೈ.ಬಿ.,

**ಶ್ರೀಮತಿ ಅನಿತ, ಬಿ.ಎ.(ಲಾ), ಎಲ್.ಎಲ್.ಬಿ., ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಹುಣಸೂರು ಆದ ನಾನು ಈ ಕೆಳಗೆ ಕಾಣಿಸಿರುವಃ**

ದೇವರಾಜು.ವೈ.ಬಿ., ಬಿನ್ ಬಸವರಾಜು,
22 ವರ್ಷ, ಕಾರ್ಮಿಕ, ವಾಸಃ ಎಮ್ಮೆಕೊಪ್ಪಲು ಗ್ರಾಮ,
ಹುಣಸೂರು ತಾಲ್ಲೂಕು.

**<u>ದೋಷಾರೋಪಣೆ</u>**

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 15.01.2026ರಂದು ಸಂಜೆ 4 ರಿಂದ 4.45 ಗಂಟೆ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದು ಹುಣಸೂರು – ಹೆಚ್ ಡಿ ಕೋಟೆ ಮುಖ್ಯ ರಸ್ತೆಯ ಚಿಕ್ಕ ಹುಣಸೂರಿನ ಕೆರೆಯ ಬಳಿ ಇರುವ ಕಾಫಿ ಹಟ್ ಬಳಿ ಆರೋಪಿಯಾದ ನೀವು ನಿಮ್ಮ ಕೆಎ–55/ಎನ್–3103 Hundai Gets Prince Asta Car ನ್ನು ಹುಣಸೂರು ಪಟ್ಟಣ ಕಡೆಯಿಂದ ಹೆಚ್ ಡಿ ಕೋಟೆ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ

ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 281 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ವಿವರಿಸಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಭಾಗದಲ್ಲಿ ಇದ್ದ ಕಾಫಿ ಹಟ್ ಕಡೆಗೆ ನಿಮ್ಮ ಕಾರನ್ನು ತಿರುಗಿಸಲು ಯಾವುದೇ ಸೂಚನೇ ನೀಡದೇ ಇದ್ದಕ್ಕಿದ್ದಂತೆಯೇ ಸಡನ್ ಆಗಿ ರಸ್ತೆಯ ಮಧ್ಯ ಭಾಗದಿಂದ ಎಡಭಾಗಕ್ಕೆ ತಿರುಗಿಸಿದಾಗ ಚಾಸಾ.1 ಮಂಜುರವರು ಮತ್ತು ಚಾಸಾ.2 ಮಧು ರವರನ್ನು ಅವರ ಕೆಎ-45/ಇಇ-2949ರ Bajaj CT 110 X ಬೈಕಿನ ಹಿಂದೆ ಕೂರಿಸಿಕೊಂಡು ಹೆಚ್ ಡಿ ಕೋಟೆ ಕಡೆಗೆ ಹೋಗುತ್ತಿದ್ದಾಗ ಹಿಂದಿನಿಂದ ನಿಮ್ಮ ಕಾರು ಅವರ ಬೈಕಿಗೆ ಡಿಕ್ಕಿ ಮಾಡಿದ ಪರಿಣಾಮ ಚಾಸಾ.1 ಮತ್ತು ಚಾಸಾ.2ರವರು ಬೈಕ್ ಸಮೇತ ಕೆಳಕ್ಕೆ ಬಿದ್ದು ಚಾಸಾ.1ರವರ ಎಡ ಪಾದ ಮತ್ತು ಮಂಡಿಗೆ ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.125(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ವಿವರಿಸಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಚಾಸಾ.2ರವರ ಎಡ ಮಂಡಿ ಮತ್ತು ಎಡ ಪಾದಕ್ಕೆ ತೀವ್ರ ಸ್ವರೂಪದ ಗಾಯಪಡಿಸಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.125(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಾಣಿಸಿದ ಆರೋಪಣೆಯ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸುತ್ತೇನೆ ಎಂದು ಈ ಮೂಲಕ ಆಜ್ಞೆ ಮಾಡುತ್ತಿದ್ದೇನೆ.

Sd/-

(ಅನಿತ)

ANITHA Digitally signed by ANITHA Date: 2026.07.06 17:57:40 +0530

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂ., ಹುಣಸೂರು.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು.**

**ಸಿಸಿ ನಂ.192/2026**

**ಆರೋಪಿ**

ಆಪಾದಿತನ ಹೆಸರು : ದೇವರಾಜು.ವೈ.ಬಿ.,
ತಂದೆಯ ಹೆಸರು : ಬಸವರಾಜು, ,
ವಯಸ್ಸು : 22 ವರ್ಷ,
ಉದ್ಯೋಗ : ಕಾರ್ಮಿಕ
ವಾಸಸ್ಥಳ : ಎಮ್ಮೆಕೊಪ್ಪಲು ಗ್ರಾಮ,
ಹುಣಸೂರು ತಾಲ್ಲೂಕು. .

**ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆಯ ಕಲಂ 234ರ ಅಡಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1 : | ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆ 2 : | ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ? |
| ಉತ್ತರಃ | ತಪ್ಪು ಒಪ್ಪಿಕೊಳ್ಳುತ್ತೇನೆ |

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕಃ 06.07.2026 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು, ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ANITHA Digitally signed by ANITHA Date: 2026.07.06 17:57:45 +0530

Sd/-
(ಅನಿತ)
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಹುಣಸೂರು.**

**ಆರೋಪಿಯ ಸಹಿಃ**